# ಯುದ್ಧ ಭೂಮಿಯಲ್ಲಿ ಗಾಂಧಾರಿ ಕೃಷ್ಣೆಗೆ 'ನಾನೂ ನೀನೂ ಈಗ ಒಂದೇನೇ. ನಮಗೆ ಯಾರಿದ್ದಾರೆ?'

ಕಣ್ಣಾಡಿಸಿದ, ಆಲದ ಮರದ ಮೇಲೆ ನೋಡಿದ. ಅದರ ಮೇಲೆ ತುಂಬಾ ಕಾಗೆಗಳು ಇದ್ದವು. ಸಾವಿರಾರು ಕಾಗೆಗಳು ಆ ರಾತ್ರಿ ಆ ಮರದ ಮೇಲೆ ಒಂದೊಂದು ಕೊಂಬೆಯ ಮೇಲೂ ಅಷ್ಟಷ್ಟು ಕಾಗೆ ಕೂತು ಸುಖವಾಗಿ ನಿದ್ದೆ ಮಾಡುತ್ತಿದ್ದವು. ಹಾಗೇ ಮರದ ಮೇಲೆ ಕೊಂಬೆ ಕೊಂಬೆಯಲ್ಲಿ ಮಲಗಿದ ಕಾಗೆಗಳನ್ನ ಒಂದು ಗೂಬೆ ನೋಡಿತು. ನೋಡುವುದಕ್ಕೆ ರಣಭಯಂಕರವಾಗಿತ್ತು ಆ ಗೂಬೆ. ದೊಡ್ಡ ದನಿ. ಭರ್ಜರಿ ಗಾತ್ರ, ಹಸಿರು ಕಣ್ಣು, ಮುಂಗುಸಿಯ ಕಂದು ಬಣ್ಣ, ಚೂಪಾದ ಕೊಕ್ಕು, ಹರಿತವಾದ ಉಗುರು ಗರುಡನಷ್ಟೇ ವೇಗ ಅದಕ್ಕೆ. ಆ ಹಕ್ಕಿ ರೆಕ್ಕೆ ಸದ್ದನ್ನೇ ಮೆಲ್ಲಗೆ ಮಾಡಿಕೊಂಡು ಮರದಲ್ಲಿ ಕರಗೇ ಬಿಟ್ಟಿತೇನೋ ಹಾಗೆ ಇಳಿಯಿತು. ಇಳಿದದ್ದೇ ಆ ಗೂಬೆ ಮಲಗಿದ್ದ ಕಾಗೆಗಳ ಕೆಲವದರ ಪುಕ್ಕ ಕಿತ್ತು, ಕೆಲವದರ ತಲೆ ತರಿದು, ಕೆಲವದರ ಕಾಲು ಮುರಿಯಿತು. ತನ್ನ ಕಾಲುಗಳೇ ಆಯುಧವಾಗಿದ್ದ ಆ ಗೂಬೆ, ಒಂದು ಕ್ಷಣದಲ್ಲಿ ಕಣ್ಣಿಗೆ ಬಿದ್ದ ಹಕ್ಕಿಗಳನ್ನೆಲ್ಲ ಕೊಂದು ಹಾಕಿತು. ಆಲದ ಮರದ ಸುತ್ತ ಎಲ್ಲಿ ನೋಡಿದರೂ ಕಾಗೆಗಳ ಶರೀರ, ಕಾಲು, ತಲೆ, ರೆಕ್ಕೆ, ರಾಶಿ ರಾಶಿಯಾಗಿ ಬಿದ್ದಿತ್ತು. ಹಾಗೆ ಕಾಗೆಗಳ ಹಿಂಡು ಕೊಂದದ್ದಕ್ಕೆ ಆ ಗೂಬೆ ಕೌಶಿಕಕ್ಕೆ ಹಿಗ್ಗೋ ಹಿಗ್ಗು. ಶತ್ರುಗಳನ್ನು ಕೊಂದರೆ ಹಾಗೆ ಕೊಲ್ಲಬೇಕು ಅದು ಕೊಲ್ಲುವ ರೀತಿ ಎನಿಸುವಂತೆ.

ಆ ಕರಾಳ ರಾತ್ರಿ ಕೌಶಿಕ ಮಾಡಿದ ಕೆಲಸ ನೋಡಿ ಅಶ್ವತ್ಥಾಮ ತನಗೆ ಬಂದ ಭಾವನೆಯನ್ನೇ ಸಂಕಲ್ಪವನ್ನಾಗಿಸಿ ದೃಢ ಮಾಡಿಕೊಂಡು ಬಿಟ್ಟ.

ಈ ಹಕ್ಕಿ ನನಗೆ ಪಾಠ ಹೇಳಿಕೊಟ್ಟಿದೆ. ಶತ್ರುಗಳನ್ನು ಮುಗಿಸುವುದಕ್ಕೆ ಇದೇ ಸರಿಯಾದ ಸಮಯ. ಗೆದ್ದ ಹುಮ್ಮಸ್ಸಿನಲ್ಲಿದ್ದಾರೆ. ಅವರನ್ನು ಯುದ್ಧಮಾಡಿ ಕೊಲ್ಲುವುದಕ್ಕೆ ಈಗ ಆಗುವುದಿಲ್ಲ. ಗೆದ್ದಿದ್ದಾರೆ, ಜತೆಗೆ ಬಲವಂತರು ಗುರಿ ಸಾಧಿಸಿದವರು ಅವರು.

`ನಾನು ಅವರನ್ನ ಕೊಲ್ಲುತ್ತೇನೆ ಅಂತ ರಾಜನಿಗೆ ಮಾತು ಕೊಟ್ಟುಬಿಟ್ಟಿದೇನೆ. ಅವರ ಜತೆ ಈಗ ನ್ಯಾಯದ ಯುದ್ಧ ಮಾಡುವುದು ಅಂದರೆ ಪ್ರಾಣ ಬಿಡುವುದು ಅಂತಲೇ ಅರ್ಥ. ಉರಿಯುವ ಬೆಂಕಿಗೆ ಪತಂಗ ಬಿದ್ದ ಹಾಗಾಗುತ್ತದೆ ಅಷ್ಟೆ. ಶತ್ರು ನಾಶವಾಗಬೇಕು ಅಂತ ಹಟ ಇರಬೇಕು. ಅದಕ್ಕೆ ಅನುಮಾನದ ದಾರಿಗಿಂತ ನಿಶ್ಚಿತವಾದ ದಾರಿ ಇರಬೇಕು. ಶಾಸ್ತ್ರವಿಶಾರದರೂ ಇದನ್ನೇ ತಾನೇ ಹೇಳೋದು. ಅವರ ಪ್ರಕಾರವೇ ಜನರೆಲ್ಲ ತೆಗಳುವ ದುಷ್ಟ ಕೆಲಸ ಕೂಡ, ಫಲ ಸಿದ್ಧಿ ಆದರೆ ಕ್ಷತ್ರ ಧರ್ಮದ ಕರ್ತವ್ಯ ಎನಿಸಿಕೊಳ್ಳುತ್ತದೆ. ಅಂಥ ನಿಂದೆಗೆ ಲಾಯಕ್ಕಾದ ಹೀನ ಕೆಲಸವನ್ನ ಪಾಂಡವರು ಎಷ್ಟು ಮಾಡಿಲ್ಲ! ಅರ್ಧ ರಾತ್ರಿಯಲ್ಲಿ, ಶತ್ರು ಸೈನ್ಯ ಮಲಗಿರುವಾಗ, ರಕ್ಷಕರಿಲ್ಲದಾಗ, ಸೈನ್ಯದಲ್ಲೇ ಒಡಕಾದಾಗ, ಶತ್ರುವನ್ನ ನಾಶಮಾಡಬಹುದು ಎಂಬ ನೀತಿಯೇ ಇದೆಯಲ್ಲಾ' ಎಂದು ಯೋಚಿಸಿ ಅಶ್ವತ್ಥಾಮ ಆ ರಾತ್ರಿಯೇ ಎಲ್ಲರೂ ಮಲಗಿದ್ದಾಗಲೇ ಪಾಂಚಾಲ ಸಮೇತರಾಗಿ ಪಾಂಡವರನ್ನೆಲ್ಲ ಕೊಲ್ಲಬೇಕು ಎಂದು ನಿರ್ಧಾರ ಮಾಡಿಬಿಟ್ಟ ಆ ಅಂಧಕಾರದಲ್ಲಿ.

ಇಂದಿನ ರಾಜ ಎಲ್ಲಿ?

ಮಕ್ಕಳು ಮೊಮ್ಮಕ್ಕಳನ್ನು ಕಳೆದುಕೊಂಡು ಶೋಕದಲ್ಲಿದ್ದ ಗಾಂಧಾರಿ ಕುಪಿತಳಾಗಿ ಕೇಳಿದಳು–

ಬೆವರುತ್ತಾ ಕೈ ಮುಗಿದುಕೊಂಡು ಯುಧಿಷ್ಠಿರ ಹತ್ತಿರ ಬಂದು, ಮಿದುವಾದ ದನಿಯಲ್ಲಿ 'ನಿನ್ನ ಮಕ್ಕಳನ್ನು ಕೊಂದ ಕಟುಕ ನಾನೇ. ನಿನ್ನ ಶಾಪಕ್ಕೆ ತಕ್ಕವನು. ಜಗತ್ತಿನ ಈ ವಿನಾಶಕ್ಕೆ ನಾನೇ ಮೂಲ. ಶಾಪ ಕೊಟ್ಟು ಬಿಡು ತಾಯೇ. ರಾಜ್ಯಕ್ಕಾಗಿ ಬಂಧುಗಳನ್ನ, ಗೆಳೆಯರನ್ನ ಕೊಂದೆ. ದ್ರೋಹ ಮಾಡಿದೆ. ಈಗ ನನಗೆ ಈ ರಾಜ್ಯವೂ ಬೇಡ, ಈ ಸಂಪತ್ತೂ ಬೇಡ. ಈ ಪ್ರಾಣವೇ ಬೇಕಾಗಿಲ್ಲ' ಎಂದ.

ಯುಧಿಷ್ಠಿರ ಸನಿಹ ಬಂದಿದ್ದ. ಹೆದರಿದ್ದ. ಅವನ ಮಾತು ಕೇಳಿ ಗಾಂಧಾರಿಗೆ ಉಸಿರಾಟ ಏರಿತು. ಉಸಿರು ತಡೆಯಲಾರದೆ ಮಾತೇ ಹೊರಡಲಿಲ್ಲ. ಅವನು ತಲೆ ಬಾಗಿಸಿದ್ದ. ಕಾಲಿಗೆ ಬಿದ್ದಿದ್ದ. ಅವಳ ಕಣ್ಣಪಟ್ಟಿಯ ಸಂಧಿಯಿಂದ ಕಾಲಿಗೆ ಬಿದ್ದಿದ್ದ ಅವನ ಕೈ ಬೆರಳಿನ ತುದಿ ಕಾಣಿಸಿತು. ಅವಳ ದೃಷ್ಟಿ ತಾಗಿದ ಅವನ ಕೈಯ ಸೆಳ್ಳುಗುರು ತಕ್ಷಣ ವಿಕೃತವಾಯಿತು. ಅದನ್ನ ಕಂಡು ಅರ್ಜುನ ಹೆದರಿ ಕೃಷ್ಣನ ಬೆನ್ನ ಹಿಂದೆ ಅವಿತ. ಹೀಗೆ ಅವರೆಲ್ಲ ಬೆದರಿ ಹಿಂದು ಹಿಂದಕ್ಕೆ ಸರಿಯುವುದರ ಕಂಪನ ತಟ್ಟಿ, ಅವಳ ಕೋಪ ಕರಗಿ ಹೋಯಿತು. ಅವರನ್ನು ತಾಯಿಯ ಹಾಗೆ ಸಂತೈಸಿದಳು. ಅಲ್ಲಿಂದ ಪಾಂಡವರು ವೀರಮಾತೆಯಾದ ತಮ್ಮ ತಾಯಿ ಬಳಿ ಬಂದರು.

ವಿಶಾಲ ಹೃದಯದ ತಾಯ ಬಳಿಗೆ ಮಕ್ಕಳನ್ನು ಕಂಡು ಬಹಳ ದಿನವಾಗಿತ್ತು. ಅವರ ಚಿಂತೆಯೇ ತುಂಬಿಕೊಂಡಿತ್ತು. ಕಂಡ ಕೂಡಲೇ ದುಃಖ ತಡೆಯಲಾಗಲಿಲ್ಲ. ಸೆರಗಲ್ಲಿ ಮುಖ ಮುಚ್ಚಿಕೊಂಡಳು. ಮಕ್ಕಳೊಂದಿಗೆ ತಾನೂ ಕಣ್ಣೀರಿಡುತ್ತಾ, ಮಕ್ಕಳ ಮೈಯೆಲ್ಲಾ ತುಂಬಿಕೊಂಡಿದ್ದ ಶಸ್ತ್ರಗಾಯ ನೋಡಿ ಮರುಗುತ್ತಾ ಒಬ್ಬೊಬ್ಬರನ್ನಾಗಿ ಮುಟ್ಟುತ್ತಾ ತಡವುತ್ತಾ ನೆತ್ತಿ ಮೂಸುತ್ತ ಆರ್ತಳಾಗಿ ನೆಲದ ಮೇಲೆ ಹೊರಳಾಡುತ್ತಿದ್ದ ಪಾಂಚಾಲಿಯ ಹತ್ತಿರ ಬಂದಳು.

ಪಾಂಚಾಲಿ: ಎಂಥೆಂಥ ಮಕ್ಕಳು, ಎಲ್ಲಾ ಹೋದರು. ಸುಭದ್ರೆಯ ಮಗನೂ ಹೋದ. ನೀನು ಮೊಮ್ಮಕ್ಕಳನ್ನ ನೋಡಿ ಎಷ್ಟು ದಿನ ಆಗಿತ್ತು. ಇನ್ನು ನೋಡುವ ಭಾಗ್ಯವೇ ಇಲ್ಲ,

ಎಲ್ಲಾ ಹೋದರು. ಈ ರಾಜ್ಯದಿಂದ ನನಗೇನಾಗಬೇಕು...

ಸಂಜಯ: ಅಳುತ್ತಾ ಬಿದ್ದಿದ್ದ ದ್ರೌಪದಿಯನ್ನು ಮೇಲೆತ್ತಿ ಆ ದುಃಖ ಜರ್ಜರಿತಳನ್ನು ತೊಡೆ ಮೇಲೆ ಇಟ್ಟುಕೊಂಡಳು. ಆಮೇಲೆ ಎಲ್ಲರನ್ನೂ ಕರೆದುಕೊಂಡು ಎಲ್ಲರಿಗಿಂತ ದುಃಖಿನಿಯಾದ ಗಾಂಧಾರಿಯ ಹತ್ತಿರ ಬಂದಳು.

ಗಾಂಧಾರಿ: ಮಗಳೇ ಹೀಗೆ ಅಳಬಾರದು. ನನ್ನನ್ನ ನೋಡು, ನಿನ್ನನ್ನು ಮರೆ

ಈ ಲೋಕ ವಿನಾಶ, ಕಾಲದ ಸಂಚು. ಆಗಬೇಕಿತ್ತು ಆಯಿತು

ನಾನೂ ನೀನೂ ಈಗ ಒಂದೇನೇ. ನಮಗೆ ಯಾರಿದಾರೆ?

ನಾವೇ ಒಬ್ಬರಿಗೊಬ್ಬರು ಸಂತೈಸಿಕೊಳ್ಳಬೇಕು

ನನ್ನದೂ ತಪ್ಪಿನಿಂದ ಕುಡಿ ಸಮೇತ ಇಡೀ ಕುಲ ನಾಶವಾಯಿತು.

ತನ್ನ ದುಃಖದಿಂದಾಗಿ ಬರೀ ಕರುಣೆಯೇ ತುಂಬಿಕೊಂಡಿದ್ದ ಗಾಂಧಾರಿ, ಮಸಣವಾಗಿದ್ದ ರಣರಂಗದಲ್ಲಿ ಕೂತು ನುಡಿಯುತ್ತಿರುವುದನ್ನು ವ್ಯಾಸ ಒಳಗಣ್ಣಿಂದ ಕಂಡ. ಅವಳು ಪತಿವ್ರತೆ. ಸಮವ್ರತೆ, ಉಗ್ರ ತಾಪಸಿ. ಸದಾ ಸತ್ಯ ನುಡಿಯುವಾಕೆ. ಪುಣ್ಯವಂತ ಮಹರ್ಷಿ ವ್ಯಾಸ ಅವಳಿಗೆ ಒಳಗಣ್ಣು ಕೊಟ್ಟ. ಅವಳಿಗೀಗ ದೂರದ್ದೂ ಹತ್ತಿರದಲ್ಲೇ ಕಾಣುತ್ತಿತ್ತು. ರಣರಂಗ ನೋಡಿ ಅವಳ ಮೈ ಬೆಚ್ಚಿ ರೋಮಗಳು ನಿಮಿರಿದವು.

ಎಲ್ಲಿ ನೋಡಿದರೂ ಎಲುಬು, ಕೂದಲು, ಬಟ್ಟೆಬರೆ ನೆಲವೆಲ್ಲಾ ರಕ್ತದಿಂದ ನೆನೆದು ಹೋಗಿತ್ತು. ಬರೀ ಶರೀರಗಳೇ ತುಂಬಿ ಹೋಗಿದ್ದವು.

ಆನೆ ಕುದುರೆ ಪದಾತಿ ರಥ ಎಲ್ಲವೂ ರಕ್ತದಲ್ಲಿ ಊನಿಯುತ್ತಿದ್ದವು

ಒಂದಿಷ್ಟು ಬರೀ ರುಂಡಗಳು ತಲೆಯಿಲ್ಲದ ಶರೀರಗಳು ಒಂದಿಷ್ಟು ಹೆಂಗಸರು ಗಂಡಸರು ಆನೆ ಕುದುರೆ ಎಲ್ಲದರ ಚೀತ್ಕಾರವು ಕಲಸಿಕೊಂಡುಬಿಟ್ಟಿತ್ತು.

ನೆಲದ ತುಂಬಾ ನರಿ ಗುಳ್ಳೇನರಿ ಹದ್ದು ರಣಹದ್ದು ಕಾಗೆಗಳೇ ತುಂಬಿಕೊಂಡು ಬಿಟ್ಟಿದ್ದವು.

ಪುರುಷರನ್ನ ತಿಂದು ಹಾಕುವ ರಾಕ್ಷಸರು ಖುಷಿಯಿಂದ ಕೇಕೆ ಹಾಕುತ್ತಿದ್ದರು

ನರಿ ಹದ್ದುಗಳು ಅಪಶಕುನ ಕೂಗು ಹಾಕುತ್ತಿದ್ದವು

ಹತಬಂಧುವಾದ ಧೃತರಾಷ್ಟ್ರ ಮತ್ತು ವಾಸುದೇವನನ್ನು ಮುಂದಿಟ್ಟುಕೊಂಡು ಕುರುಸ್ತ್ರೀಯರು ರಣರಂಗದ ಕಡೆಗೆ ಬಂದರು.

ತಮ್ಮ ಪತಿಗಳನ್ನು ಕೊಂದ ಆ ಕುರುಕ್ಷೇತ್ರದಲ್ಲಿ ತಂತಮ್ಮ ಮಕ್ಕಳು, ಒಡಹುಟ್ಟುಗಳು, ಅಪ್ಪಂದಿರು, ಗಂಡಂದಿರು ಸತ್ತು ಬಿದ್ದಿದ್ದರು.